ಗಳಿಗೂ ಒಂದು ಪತ್ರವನ್ನು ಬರೆದಿದ್ದೇನೆ. ನಮ್ಮ ದೇಶದಲ್ಲಿ ರೈತರು ಬೆಳೆದೆರತಕ್ಕ ಹತ್ತಿ ಬೇಕಾದಷ್ಟು ಇದೆ. ಆದನ್ನು ಕೇಳುವವರು ಇಲ್ಲ ಪ್ರಪಂಚದಲ್ಲೇ ನಮ್ಮ ದೇಶದ ಹತ್ತಿಯ ಬಟ್ಟೆ ಬಗ್ಗೆ ಒಳ್ಳೆಯ ಹೆಸರು ಇದೆ. ಇವೊತ್ತು ಹತ್ತಿ ಬೆಳೆಯುತಕ್ಕ ರೈತರಿಗೆ ಆರ್ಥಿಕ ದೃಷ್ಟಿಯಿಂದ ಒಳ್ಳೆಯದು ಎಂದು ನನ್ನ ಭಾವನೆ. ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯ ಕೆಲವು ಕಡೆಗಳಲ್ಲಿ ೧೦ ಲಕ್ಷ ಕ್ವಿಂಟೋಲ್ ಹತ್ತಿ ಇದೆ, ಅದನ್ನು ಯಾರೂ ಕೇಳುತ್ತಾ ಇಲ್ಲ ಅಲ್ಲಿರತಕ್ಕ ರೈತರ ಬವಣೆಯನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ತಾವು ಬೇರೆ ಬೇರೆ ವಂರಗಳಿಂದ ಬಟ್ಟೆ ತಯ್ಯಾರು ಮಾಡಲಿಕ್ಕೆ ಹೊರಟರೆ ರೈತರು ಹತ್ತಿ ಬೆಳೆಯುವುದನ್ನೇ ಬಿಡಬೇಕಾಗುತ್ತದೆ. ಆದ್ದರಿಂದ, ಇನ್ನು ಮುಂದೆ ಬೇರೆ ಬೇರೆ ವಂರಗಳಿಂದ ಬಟ್ಟೆ ತಯಾರು ಮಾಡತಕ್ಕ ಫ್ಯಾಕ್ಟರಿಗಳಿಗೆ ಲೈಸೆನ್ಸ್ ಕೊಡಬಾರದು. ಹತ್ತಿಯಿಂದ ತಯಾರು ಮಾಡತಕ್ಕದ್ದಕ್ಕೇ ಅವಕಾಶ ಕೊಡಬೇಕು. ಇನ್ನು ಮಾಡರನೈಜೇಷನ್ ಬಗ್ಗೆ ಈಗಾಗಲೇ ನಮ್ಮ ಸ್ನೇಹಿತರು ಹೇಳಿರುವುದರಿಂದ ನಾನು ಆ ಬಗ್ಗೆ ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಮಾಡರನೈಜೇಷನ್ ಮಾಡುವುದರಿಂದ ತೊಂದರೆಯೇನೂ ಆಗುವುದಿಲ್ಲ. ಇನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ವ್ಯವಸಾಯ ಇಲಾಖೆಯ ಬಗ್ಗೆ ಹೆಚ್ಚು ಗಮನ ಕೊಟ್ಟಿಲ್ಲ. ಇನ್ನು ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿದ್ದಾರೆ ಅದಕ್ಕೆ ಒಬ್ಬರು ಸಂಬಂಧ ಪಟ್ಟ ಮಂತ್ರಿಗಳು ಇದ್ದಾರೆ ಅದರೆ ಅದರಲ್ಲಿ ಇವೊತ್ತಿನವರೆಗೂ ಏನೂ ಕಾಣಿಸಂತ್ತಿಲ್ಲ. ಡಿಮ್ಯಾಂಡ್‌ನಲ್ಲಿ ನಾನು ಆ ಬಗ್ಗೆ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ೭-೯ ಜಿಲ್ಲೆಗಳಲ್ಲಿ ಡ್ರೈ ಲಾಂಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಇದೆ. ಕ್ಷಾಮ ಬರತಕ್ಕ ಜಿಲ್ಲೆಗಳು ಅಂದರೆ ೬-೭ ಇಂಚು ಮಳೆ ಬರತಕ್ಕ ಪ್ರದೇಶ ಇಸ್ರೇಲ್‌ನಲ್ಲಿ ೬-೭ ಇಂಚು ಮಳೆ ಬರುವ ಕಡೆಗಳಲ್ಲೂ ಜನರು ಬೆಳೆ ತೆಗೆಯಂತ್ತಿದ್ದಾರೆ. ಆದರ ಬಗ್ಗೆ ಅಧ್ಯಯನ ಮಾಡಲಿಕ್ಕೆ ಯಾರಾದರೂ ತಜ್ಞರನ್ನು ಕಳುಹಿಸಿಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಮಂತ್ರಿಗಳವರ ಹೇಳಿಕೆ

ಕುದುರೆ ಮೋತಿ ಪ್ರಕರಣದ ಬಗ್ಗೆ ವಿಚಾರಣ ಸಮಿತಿ

ಅಧ್ಯಕ್ಷರು.—ಈಗ ಮಾನ್ಯ ಸಚಿವರಾದ ಶ್ರೀ ರಾಚಯ್ಯನವರು ಹೇಳಿಕೆ ಮಂಡಿಸುವರು.

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೇ ಕುದುರೆಮೋತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧ್ಯಯನಕ್ಕೆಂದು ರಚಿಸಲಾಗಿರುವ ಸಮಿತಿಯ ವಿವರ ಈ ಮುಂದನಂತಿದೆ.

ಸದರಿ ಸಮಿತಿಯು ಪರಿಶೀಲಿಸಬೇಕಾದ ವಿಷಯಂಗಳು ಈ ಮುಂದಿನಂತಿದೆ

೧. ಕುದುರೆ ಮೋತಿಯಲ್ಲಿ ೧೧-೬-೧೯೮೫ರಂದು ನಡೆದ ದುರ್ಘಟನೆಗಳಿಗೆ ಹಿನ್ನೆಲೆ.

೨. ಕುದುರೆ ಮೋತಿ ಪ್ರಕರಣಕ್ಕೆ ಪೂರ್ವ ಹಾಗೂ ನಂತರ ಪೋಲೀಸರು ತೆಗೆದುಕೊಂಡ ಕ್ರಮಂಗಳಲ್ಲಿ ಏನಾದರೂ ನ್ಯೂನತೆಗಳಿದ್ದುವೇ; ಇರುವುದೆ ?

೩. ಹಾಗೇನಾದರೂ ನ್ಯೂನತೆಗಳಿದ್ದಲ್ಲಿ ಅವುಗಳಿಗೆ ಯಾರಂ ಜವಾಬ್ದಾರರು ?

೪. ಮತ್ತೆ ಇಂತಹ ದುರ್ಘಟನೆಗಳು ನಡೆಯದಂತೆ ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು ?

೫. ಈ ಘಟನೆಗೆ ಸಂಬಂಧಿಸಿದಂತೆ ಸದನದ ಸಮಿತಿಯು ಗಮನಕ್ಕೆ ಬರಬಹುದಾದ ಮಂತ್ಯಾವುದಾದರೂ ವಿಷಯಂಗಳು.

ಶ್ರೀ ಬಿ. ರಾಚಯ್ಯ.—ನಾನು ಸಂಬಂಧಪಟ್ಟ ಪ್ರಸ್ತಾವನೆಯನ್ನು ಮಂಡಿಸುತ್ತೇನೆ.

ರಾಯಚೂರು ಜಿಲ್ಲೆಯ ಕುದುರೆಮೋತಿ ಗ್ರಾಮದಲ್ಲಿ ನಡೆದ ಘಟನೆಗಳ ಬಗ್ಗೆ ಅಧ್ಯಯನ ಮಾಡಲು ಈ ಸದನದ ಕೆಳಕಂಡ ೯ ಜನ ಸದಸ್ಯರು ಹಾಗೂ ವಿಧಾನ ಪರಿಷತ್ತಿನ ಒಪ್ಪಿಗೆ ನಂತರ ವಿಧಾನ ಪರಿಷತ್ತಿನ ೩ ಜನ ಸದಸ್ಯರ ವಿಶೇಷ ಸಮಿತಿಯೊಂದನ್ನು ರಚಿಸಲಂ ಈ ಸಭೆಯಂ ನಿರ್ಧಾರ ಕೈಗೊಳ್ಳುತ್ತದೆ. ಮತ್ತು ಸಮಿತಿ ತನ್ನ ವರದಿಯನ್ನು ಹತ್ತು ದಿನಗಳಲ್ಲಿ ಸಭೆಗೆ ಒಪ್ಪಿಸಬೇಕು.

ವಿಧಾನ ಸಭೆಯ ಸದಸ್ಯರು

೧. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್
೨. ಶ್ರೀ ವಿಶ್ವನಾಥ ರೆಡ್ಡಿ
೩. ಶ್ರೀಮತಿ ಮುಕ್ತಾರ್ ಉನ್ನಿಸ್ಸಾ
೪. ಶ್ರೀ ಮೊಹ್ಮದ್ ಮೊಹಿನುದ್ದೀನ್
೫. ಶ್ರೀ ಮಂಟೂರ್ ಜಿ.ವಿ.
೬. ಶ್ರೀ ಹೆಚ್.ಟಿ. ಕೃಷ್ಣಪ್ಪ
೭. ಶ್ರೀ ಯು. ಭೂಪತಿ
೮. ಶ್ರೀ ಬಿ. ಸ್ವಾಮಿರಾವ್
೯. ಶ್ರೀ ಎಚ್.ಸಿ. ಮಹದೇವಪ್ಪ

ಅಧ್ಯಕ್ಷರು.—ಪ್ರಸ್ತಾಪವನ್ನು ಮತಕ್ಕೆ ಹಾಕುತ್ತೇನೆ.

" ರಾಯಚೂರು ಜಿಲ್ಲೆಯ ಕುದುರೆಮೋತಿ ಗ್ರಾಮದಲ್ಲಿ ನಡೆದ ಘಟನೆಗಳ ಬಗ್ಗೆ ಅಧ್ಯಯನ ಮಾಡಲು ಈ ಸದನದ ಕೆಳಕಂಡ ೯ ಜನ ಸದಸ್ಯರು ಹಾಗೂ ವಿಧಾನ ಪರಿಷತ್ತಿನ ಒಪ್ಪಿಗೆ ನಂತರ ವಿಧಾನ ಪರಿಷತ್ತಿನ ೩ ಜನ ಸದಸ್ಯರ ವಿಶೇಷ ಸಮಿತಿಯೊಂದನ್ನು ರಚಿಸಲು ಈ ಸಭೆಯು ನಿರ್ಧಾರ ಕೈಗೊಳ್ಳುತ್ತದೆ. ಮತ್ತು ಸಮಿತಿ ತನ್ನ ವರದಿಯನ್ನು ಹತ್ತು ದಿನಗಳಲ್ಲಿ ಸಭೆಗೆ ಒಪ್ಪಿಸಬೇಕು.

ವಿಧಾನ ಸಭೆಯ ಸದಸ್ಯರು

೧) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್
೨) ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್
೩) ಶ್ರೀಮತಿ ಮುಕ್ತಾರ್ ಉನ್ನಿಸ್ಸಾ
೪) ಶ್ರೀ ಮೊಹ್ಮದ್ ಮೊಹಿನುದ್ದೀನ್
೫) ಶ್ರೀ ಮಂಟೂರ್ ಜಿ.ವಿ,
೬) ಶ್ರೀ ಹೆಚ್.ಟಿ. ಕೃಷ್ಣಪ್ಪ
೭) ಶ್ರೀ ಯು. ಭೂಪತಿ
೮) ಶ್ರೀ ಬಿ. ಸ್ವಾಮಿರಾವ್
೯) ಶ್ರೀ ಎಚ್.ಸಿ. ಮಹದೇವಪ್ಪ

ಪ್ರಸ್ತಾವವನ್ನು ಅಂಗೀಕರಿಸಲಾಯಿತು.